# ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

**Karnataka State Electronic Development Corporation Limited**
**(A Government of Karnataka Enterprise)**
**CIN No. U75112KA1976SGC003055**

ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಯ್ಕೆ ಪ್ರಾಧಿಕಾರ ಇವರ ನೋಂದಾಯಿತ ಕಛೇರಿ,
2ನೇ ಮಹಡಿ, ಟಿಟಿಎಂಸಿ "ಎ" ಬ್ಲಾಕ್, ಬಿಎಂಟಿಸಿ, ಶಾಂತಿನಗರ, ಕೆ.ಹೆಚ್ ರೋಡ್, ಬೆಂಗಳೂರು-560 027

ಸಂಖ್ಯೆ: ಕೆಎಸ್ಇಡಿಸಿ/ಸಿಬ್ಬಂದಿ/ವ್ಯನಿ/ಬ್ಯಾಕ್‌ಲಾಗ್-1/2016-17 ದಿನಾಂಕ. 27.11.2018

## ತಿದ್ದುಪಡಿ ನೇಮಕಾತಿ ಪ್ರಕಟಣೆ

ದಿನಾಂಕ 22.11.2018ರ ತಿದ್ದುಪಡಿ ನೇಮಕಾತಿ ಪ್ರಕಟಣೆಯ ಕ್ರಮ ಸಂಖ್ಯೆ:3.0ರ ಲಿಖಿತ ಪರೀಕ್ಷೆಯಲ್ಲಿ ಯಾವುದೇ ರೀತಿಯ ಲಿಖಿತ ಪರೀಕ್ಷೆ ಇರುವುದಿಲ್ಲ ಎಂದು ಪ್ರಕಟಿಸಲಾಗಿತ್ತು. ಆದರೆ, ನಿಗಮದ ಆಡಳಿತಾತ್ಮಕ ಕಾರಣಗಳಿಂದ ಲಿಖಿತ ಪರೀಕ್ಷೆ ನಡೆಸಲು ಕ್ರಮ ಕೈಗೊಂಡಿರುವುದರಿಂದ, ಲಿಖಿತ ಪರೀಕ್ಷೆ ನಡೆಸುವ ಕುರಿತು ಹಾಗೂ ಕ್ರಮ ಸಂಖ್ಯೆ: 6.0ರ ಸ್ವೀಕೃತ ಅರ್ಜಿಗಳ ಪರಾಮರ್ಶೆ / ಆಯ್ಕೆ ವಿಧಾನ ಕುರಿತು, ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.

3.0 ಲಿಖಿತ ಪರೀಕ್ಷೆ:

| ವಿಷಯ | ಗರಿಷ್ಠ | ಕನಿಷ್ಠ | ಪರೀಕ್ಷಾ ಸಮಯ |
|---|---|---|---|
| ಕನ್ನಡ | 100 | 35 | 2 ಗಂಟೆಗಳು |
| ಇಂಗ್ಲೀಷ್ | 100 | 35 | 2 ಗಂಟೆಗಳು |
| ಸಾಮಾನ್ಯ ಜ್ಞಾನ | 100 | – | 2 ಗಂಟೆಗಳು |

6.0 ಸ್ವೀಕೃತ ಅರ್ಜಿಗಳ ಪರಾಮರ್ಶೆ / ಆಯ್ಕೆ ವಿಧಾನ:

ಕನ್ನಡ ಮತ್ತು ಇಂಗ್ಲೀಷ್ **Aptitude** ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ 35 ಅಂಕಗಳನ್ನು ಪಡೆಯತಕ್ಕದ್ದು ಹಾಗೂ ಕನಿಷ್ಠ 35 ಅಂಕಗಳನ್ನು ಗಳಿಸದೇ ಇರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯ ನಾಗರೀಕ ಸೇವಾ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಿದ ಹುದ್ದೆಗಳಲ್ಲಿ ಭರ್ತಿಯಾಗದೆ ಖಾಲಿ ಇರುವ ಹುದ್ದೆಗಳಿಗೆ)(ವಿಶೇಷ ನೇಮಕಾತಿ) ನಿಯಮಗಳು, 2001 ಅನ್ವಯ 18 ವರ್ಷದಿಂದ 28 ವರ್ಷ ವಯೋಮಿತಿಯುಳ್ಳ (29 ವರ್ಷದೊಳಗಿನವರು) ಅಭ್ಯರ್ಥಿಗಳ ಒಂದು ಜೇಷ್ಠತಾ ಪಟ್ಟಿಯನ್ನು ಹಾಗೂ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಇನ್ನೊಂದು ಜೇಷ್ಠತಾ ಪಟ್ಟಿಯನ್ನು ತಯಾರಿಸಿ 29 ವರ್ಷದಿಂದ 40 ವರ್ಷಗಳ ವಯೋಮಿತಿಯ ಅಭ್ಯರ್ಥಿಗಳ ಜೇಷ್ಠತಾ ಪಟ್ಟಿಯಲ್ಲಿರುವವರಿಗೆ ಮೊದಲ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ (Provisional Select List) ಯನ್ನು ಸಾಮಾನ್ಯ ಜ್ಞಾನ **(General Knowledge) Aptitude** ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ 1:1 (ಖಾಲಿ ಹುದ್ದೆ : ಅಭ್ಯರ್ಥಿ) ಪರಿಗಣಿಸಿ ಮೆರಿಟ್ ಆಧಾರದಲ್ಲಿ ತಯಾರಿಸಲಾಗುವುದು. ಆದರೆ, ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಯ ನಂತರವೇ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸಲಾಗುವುದು. ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು ನಿಗಮದ ಯಾವುದೇ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸಲು ಸ್ಥಳ ನಿಯುಕ್ತಿಗೊಳಿಸಲಾಗುವುದು.

ಲಿಖಿತ **Aptitude** ಪರೀಕ್ಷೆಯ ಪಠ್ಯಕ್ರಮ **(Syllabus)**, ಪರೀಕ್ಷೆಗಳನ್ನು ನಡೆಸುವ ದಿನಾಂಕ ಹಾಗೂ ಸ್ಥಳವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸ್ಥಳ : ಬೆಂಗಳೂರು
ದಿನಾಂಕ : 27.11.2018

ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಯ್ಕೆ ಪ್ರಾಧಿಕಾರ,
ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು.